"ಬಹುಶಃ ಕೆಲವರ ಜೀವನ ಇಷ್ಟೇ" ಎಂದು ಬೇಸರದಿಂದ ನಿಟ್ಟುಸಿರು ಬಿಟ್ಟ ಸಂಜೀವ್.

"ಯಾರ ಬಗ್ಗೆ ಹೇಳ್ತಾ ಇದ್ದೀರಿ?" ಎಂದು ಕೇಳಿದಳು ಶೈಲಜಾ.

"ಅದೇ ನನ್ನ ಸಹೋದ್ಯೋಗಿ ಸ್ರವಂತಿ ಬಗ್ಗೆ" ಎಂದ.

"ಈಗ ಅವಳಿಗೆ ಬಂದಿರೋ ಕಷ್ಟ ಆದ್ರೂ ಏನು?" ಎಂದಳು.

"ಎಷ್ಟು ಹೇಳಿದ್ರೂ ಕಡಿಮೆನೆ. ತನ್ನ ತಂದೆ ತಾಯಿಯರ ಸಲುವಾಗಿ ಜೀವನವನ್ನೇ ವ್ಯರ್ಥ ಮಾಡ್ಕೋತಾ ಇದ್ದಾಳೆ."

"ಇಷ್ಟಕ್ಕೂ ನಡೆದದ್ದಾದರೂ ಏನು?" ಎಂದಳು ಶೈಲಜಾ.

ವಿವರವಾಗಿ ಹೇಳಿದ ಸಂಜೀವ್.

"ನೀವು ಹೇಳಿದ್ದು ಕರೆಕ್ಟ್... ಅವಳು ರಾಂಗ್ ಮೋಶನ್‌ನಲ್ಲಿದ್ದಾಳೆ" ಎಂದಳು.

"ರಾಂಗ್ ಎಮೋಶನ್!" ಎಂದ ಸಂಜೀವ್.

"ಸರಿ ಬಿಡಿ, ನೀವ್ಯಾಕೆ ಇಷ್ಟೊಂದು ಎಮೋಶನ್ ಆಗ್ತಾ ಇದ್ದೀರಾ?" ಎಂದಳು ಶೈಲಜಾ.

"ಯಾಕೆಂದ್ರೆ ಅವಳು ನನಗೆ ಬೆಸ್ಟ್ ಫ್ರೆಂಡ್, ಏನಾದ್ರೂ 'ಸಮಸ್ಯೆ' ಬಂದಾಗ ಅವಳ ಜೊತೆ ಮಾತನಾಡಿದ್ರೆ ಚಿಟಿಕೆ ಹೊಡೆಯೋದ್ರಲ್ಲಿ ಸಮಸ್ಯೆಗೆ ಪರಿಹಾರ ಸಿಗುತ್ತೆ. ಅವಳ ಜೊತೆ ಮಾತನಾಡೋದು ಕೂಡ ಒಂದು ಶಿಕ್ಷಣ" ಎಂದ ಸಂಜೀವ್ ಸ್ರವಂತಿಯನ್ನು ಹೊಗಳುವವನಂತೆ.

"ಹಾಗಿರುವಾಗ ತನ್ನ ಸಮಸ್ಯೆಯನ್ನ ತಾನು ಪರಿಹರಿಸಿಕೊಳ್ಳೋ ಪ್ರಯತ್ನ ಮಾಡಲಿಲ್ಲವೇ?" ಎಂದ ಶೈಲಜಾ ಕಡೆ ನೋಡಿದ. ಅವಳ ಮಾತು ಇಂದೇಕೊ ಸ್ವಲ್ಪ ವ್ಯಂಗ್ಯವಾಗಿ ಕಂಡಾಗ ಅವನಿಗೆ ಸಿಟ್ಟು ಬಂತು.

ಬಹುಶಃ ಪರ ಸ್ತ್ರೀಯರನ್ನು ಗಂಡ ಹೊಗಳಿದರೆ ಯಾವ ಹೆಣ್ಣು ಸಹಿಸುವುದಿಲ್ಲವೇನೊ.

"ಸರಿ ಬಿಡು. ಲಂಚ್ ಬಾಕ್ಸ್ ರೆಡಿಮಾಡು. ಆಫೀಸ್ ಟೈಮ್ ಆಗ್ತಾ ಇದೆ."

"ಯಾಕೆ? ನಿಮ್ಮ ಬೆಸ್ಟ್ ಫ್ರೆಂಡ್ ನಿಮಗೂ ಕೂಡ ಬಾಕ್ಸ್ ತರುತ್ತಾಳಲ್ಲ" ಅಂದಳು ತುಸು ಕೋಪದಿಂದ.

ಹಲವಾರು ಸಲ ಲಂಚ್ ಬಾಕ್ಸ್ ವಾಪಸ್ಸು ಮನೆಗೆ ತೆಗೆದುಕೊಂಡು ಹೋಗಿದ್ದು, ಈಗ ನೆನಪಿಗೆ ಬಂದಿರಬೇಕು.

ಆಫೀಸ್‌ಗೆ ಹೋದ ಮೇಲೆ "ಶ್ರಾವ್, ನಿನ್ನ ಜೊತೆ ಮಾತನಾಡಬೇಕು" ಎಂದ ಸಂಜೀವ್.

"ಹೇಳಿ" ಎಂದಳು ಸ್ರವಂತಿ.

"ಈಗಲ್ಲ."

"ಲಂಚ್ ಬ್ರೇಕ್‌ನಲ್ಲಾ?"

"ಅಲ್ಲ."

"ಮತ್ತೆ?" ತುಸು ಬೇಸರದಿಂದಲೇ ಅಂದಳು.

"ಆಫೀಸ್ ಮುಗಿದ ಮೇಲೆ."

"ಧರಣಿ ನನಗೋಸ್ಕರ ಕಾಯ್ತಾ ಇರ್ತಾಳೆ, ಜೊತೆಗೆ ಸಾಕಷ್ಟು ಹೋಂವರ್ಕ್ ಇರುತ್ತೆ. ಹೆಲ್ಪ್ ಮಾಡಬೇಕಲ್ವಾ?" ಅಂದಳು ಸ್ರವಂತಿ.

"ಒಂದು ದಿನ ನೀನು ಹೆಲ್ಪ್ ಮಾಡದಿದ್ರೆ ಏನೂ ಆಗೋದಿಲ್ಲ. ನಿಮ್ಮ ತಂದೆ ಇರ್ತಾರಲ್ಲ. ಹೇಗೂ ಖಾಲಿ ಅಲ್ವಾ?" ಅಂದ ಸಂಜೀವ್. ಆ ಮಾತಿನ ಕೊನೆ ಪದ ಯಾಕೋ ಸ್ವಲ್ಪ ಮನಸ್ಸಿಗೆ ನೋವೆನಿಸಿ ತೀಕ್ಷ್ಣವಾಗಿ ನೋಡಿದಳು.